ಶ್ರೀ ಹೆಚ್.ಡಿ. ದೇವೇಗೌಡ... ಇದರ ಬಗ್ಗೆ ಅಕೌಂಟ್ಸ್ ಕೊಡಲಿಕ್ಕೆ ತೊಂದರೆ ಇಲ್ಲ. ೧೯೬೦ನೇ ಇಸವಿಯಿಂದ ಮಾಡಿಂಗ್ಸ್‌ಗೆ ಎಷ್ಟು ಖರ್ಚಾಯಿತು, ಕಾಫಿ ತರಿಸುವುದಕ್ಕೆ ಎಷ್ಟು ಖರ್ಚು ಮಾಡಲಾಗಿದೆ, ಟಿ.ವಿ. ಪಾತ್ರ ಡಿ.ವಿ. ಎಷ್ಟು ಕೊಟ್ಟಿದ್ದಾರೆ ಎಂಬುದೆಲ್ಲಾ ಲೆಕ್ಕಾ ಇದ್ದೇ ಇರುತ್ತದೆ. ಮಾಡಿಸಬೇಕು ಎಂದರೆ ಹುಡುಕಿಸುತ್ತೇನೆ. ೬೦ನೇ ಇಸವಿಯಿಂದ ಅಂದರೆ ಸುಮಾರು ೨೭ ವರ್ಷಗಳ ಲೆಕ್ಕವನ್ನು ನೋಡಬೇಕಾಗುತ್ತದೆ. ಸ್ವಲ್ಪ ಟೈಮ್ ಕೊಟ್ಟರೆ ಹುಡುಕಿಸಿ ಇಡುತ್ತೇನೆ.

ಇನ್ನು ವಿನಯವಾಗಿ ಹೇಳಬೇಕೆಂದರೆ, ಪರಸ್ಪರ ಸಂಧಾನದ ಮುಖೇನ ಹಾಗು ಚರ್ಚೆಯ ಮುಖೇನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಪ್ರತಿಪಾದನೆ ಮಾಡಿದ್ದೇವೆ. ಆ ನಿಲುವಿನಲ್ಲಿ ನಮಗೆ ಆಸೆ ಇದೆ ಹಾಗು ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಡಿ.ವಿ. ಜಿನ್ನಪ್ಪ... ತಮಿಳುನಾಡಿನ ಸರ್ಕಾರದೊಂದಿಗೆ ೧೯೭೪ನೇ ಇಸವಿಯಲ್ಲಿ ಆದ ಅಗ್ರಿಮೆಂಟ್ ಪ್ರಕಾರ ತಮಿಳುನಾಡು ಸರ್ಕಾರದ ಸ್ಟ್ಯಾಂಡಿಂಗ್ ಏನೆಂದು ತಿಳಿಸುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ... ಈ ವಿಷಯದ ಬಗ್ಗೆ ವಿವಿಧ ಹಂತದಲ್ಲಿ ವಿವಿಧ ಚರ್ಚೆಯಾಗಿದೆ. ೧೯೭೪ರಲ್ಲಿ ಒಂದು ರೀತಿಯ ಜರ್ಜೆಯಾಗಿರಬಹುದು ೧೯೮೪ರಲ್ಲಿ ಒಂದು ರೀತಿಯ ಚರ್ಚೆಯಾಗಿರ ಬಹುದು. ಒಂದೊಂದು ರೀತಿಯಲ್ಲಿ ಬಂದೊಂದು ತರಹ ಚರ್ಚೆಗಳಾಗಿವೆ. ಯಾವುದರ ಬಗ್ಗೆಯೂ ಸಮರ್ಪಕವಾಗಿ ಚರ್ಚೆಗಳು ಆಗಿಲ್ಲ. ಸಂಧಾನದ ಚರ್ಚೆಗಳು ಆಗುತ್ತಲೇ ಬಂದಿವೆ. ಇನ್ನೂ ನಿರ್ಣಯವಾದ ಚರ್ಚೆಯಾಗಿಲ್ಲ. ಈ ವಿಷಾದವನ್ನು ಬಗೆಹರಿಸಿಕೊಳ್ಳಲಿಕ್ಕೆ ಸ್ನೇಹ ಸೌಹಾರ್ದ ಭಾವನೆಗಳಿಂದ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ನಮ್ಮ ಆಸೆ.

ಶಾಹಾಬಾದ್ ಭೀಮಾ ರಸ್ತೆಯ ವಿಸ್ತರಣೆ

೧೫೪೪ (೫೩೬) ಶ್ರೀ ಕೆ. ಬಿ. ಶಾಣಪ್ಪ (ಶಾಹಾಬಾದ್)... ಮಾನ್ಯ ಲೋಕೋಪಯೋಗಿ, ಜಲಸಂಪನ್ಮೂಲ ಹಾಗೂ ಸಣ್ಣ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಶಾಹಾಬಾದ್ ಭೀಮಾ ರೋಡ್ ೧೭ ಕಿ. ಮೀ. ಉದ್ದ ಇದ್ದು ಈಗ ೫ ಕಿ. ಮೀ. ಡಾಂಬರ್ ರಸ್ತೆ ಆಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಉಳಿದ ೧೨ ಕಿ. ಮೀ. ಉದ್ದದ ರಸ್ತೆ ತುಂಬಾ ಹಾಳಾಗಿದ್ದು ಈ ವರ್ಷದಲ್ಲಿ ಅದನ್ನು ಡಾಂಬರ್ ರಸ್ತೆಯನ್ನಾಗಿ ಮಾರ್ಪಡಿಸುವ ಭರವಸೆ ಸರಕಾರದವರು ಕೊಡುವರೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).

ಅ) ಶಾಹಾಬಾದ ಭೀಮಾ ರಸ್ತೆಯ ಒಟ್ಟು ಉದ್ದ ೧೪.೯೦ ಕಿ. ಮೀ. ಇರುವುದು. ಇದರ ಪೈಕಿ ೪.೦೦ ಕಿ. ಮೀ. ಉದ್ದಕ್ಕೆ ಡಾಂಬರ್ ಮಾಡಲಾಗಿದೆ.

ಆ) ಉಳಿದ ೧೦.೯೦ ಕಿ. ಮೀ. ಉದ್ದ ಜಲ್ಲಿ ರಸ್ತೆಯಾಗಿದ್ದು, ಮೇಲ್ಕಂಡ ಕಟ್ಟಿದ್ದರಿಂದ ಮಾರು ಜಲ್ಲಿ ಕಾರ್ಯ ಈ ವರ್ಷದಲ್ಲಿ ತೆಗೆದುಕೊಳ್ಳಲಾಗಿದೆ. ಈ ಭಾಗದ ರಸ್ತೆಗೆ ಡಾಂಬರ್ ಮಾಡುವ ಕೆಲಸ ವನ್ನು ಆರ್ಥಿಕ ಲಭ್ಯತೆಯನ್ನಾಧರಿಸಿ, ಬರುವ ವರ್ಷಗಳಲ್ಲಿ ತೆಗೆದುಕೊಳ್ಳುವುದನ್ನು ಪರಿಶೀಲಿಸ ಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ... ಮಾನ್ಯ ಅಧ್ಯಕ್ಷರೇ, ಈ ರಸ್ತೆ ಬಗ್ಗೆ ಏಕೆ ಇಷ್ಟು ಹೇಳುತ್ತಿದ್ದೇನೆಂದರೆ, ಆಹರ್ ಕೃಷ್ಣ ಪ್ರಾಜೆಕ್ಟ್‌ಗೆ ಬೇಕಾದಂಥ ರಾ-ಮೆಟೀರಿಯಲ್, ಹಾಗೂ ಸಿಮೆಂಟ್ ಈ ರಸ್ತೆಯು ಮೂಲಕವೇ ಹೋಗಬೇಕು, ಈ ರಸ್ತೆಯಲ್ಲಿ ಕೇವಲ ೪ ಕಿಲೋ ಮೀಟರ್‌ಗಷ್ಟೇ ಮಾತ್ರ ಡಾಂಬರನ್ನು ಹಾಕಲಾಗಿದೆ. ವಿಜಾಪುರ ಹಾಗು ಇನ್ನಿತರ ಕಡೆ ಈ ರಸ್ತೆಯ ಮುಖಾಂತರ ಸಿಮೆಂಟ್ ಲಾರಿಗಳು ಓಡಾಡುತ್ತವೆ. ಹೊಸಗಾರಿ ವಿಜಾಪುರ ಮತ್ತು ಧಾಯಕೊರಿಗೆ ಶಾಹಾಬಾದ್‌ನಿಂದ ಹೋಗುವ ರಸ್ತೆಯನ್ನು ೧೦ ಕಿಲೋ ಮೀಟರ್‌ನಷ್ಟು ಮಾಡಿಸಿದ್ದೀರಿ. ಇದನ್ನೂ ಹಾಗೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳುವಂತೆ ಅಲ್ಲಿ ೪ ಕಿಲೋಮೀಟರ್ ಉದ್ದದ ರಸ್ತೆಗೆ ಡಾಂಬರ್‌ನ್ನು ಹಾಕಲಾಗಿದೆ. ಮೊನ್ನೆ ತಾನೇ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆ ನಡೆದಿದೆ. ಯಾವ ಯಾವ ರಸ್ತೆಗಳು ಸರ್ಕಾರದ ವ್ಯವಸ್ಥೆಯಲ್ಲಿ ಇರುತ್ತವೆ, ಯಾವ ಯಾವ ರಸ್ತೆಗಳು ಜಿಲ್ಲಾ ಮತ್ತು ಮಂಡಲ ಪಂಚಾಯಿತಿಗಳ ಆಳ್ವಿಕೆಗೆ ಹೋಗುತ್ತವೆ ಎಂಬುದನ್ನು ನೋಡಬೇಕು. ಈ ರಸ್ತೆಯು ನಮ್ಮ ವಾಪ್ತಿಗೆ ಬರುತ್ತದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ನಮ್ಮಲ್ಲೇ ಉಳಿದರೆ ಈ ವರ್ಷವೇ ಡಾಂಬರು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಸ್ಪೆಸ್ ಮಾಡಿ ಏಕೆ ಹೇಳುತ್ತೇನೆ ಎಂದರೆ, ಇದು ಬಹಳ ಮುಖ್ಯವಾದ ರಸ್ತೆ. ನನ್ನ ಕ್ಷೇತ್ರದಲ್ಲಿ ಬರುತ್ತದೆ ಎಂದು ನಾನು ಹೇಳುತ್ತಿಲ್ಲ. ಇಡೀ ಕರ್ನಾಟಕಕ್ಕೆ ಬೇಕಾದಂಥ ಸೀಮೆಂಟ್‌ನ್ನು ಇದೇ ರಸ್ತೆಯು ಮೂಲಕ ಸಾಗಿಸಬೇಕಾಗುತ್ತದೆ ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಇದರ ರಿಪೇರಿಗೆ ಸ್ಪೇಷ್ ಆಯವ್ಯಯ ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ದಯವಿಟ್ಟು ಇದನ್ನು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಸೇರಿಸಿ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವರಿಗೆ ಆಶಾದಾಯಕವಾದ ಉತ್ತರವನ್ನು ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೋದ ವರ್ಷ ಕೇಳಿದ್ದರು, ನಾಲ್ಕು ಕಿ. ಮೀ. ನಷ್ಟು ಮಾಡಿದ್ದೇವೆ. ಈ ವರ್ಷ ಪುನಃ ಕೇಳಿದ್ದಾರೆ, ಈಗಾಗಲೇ ಹೇಳಿದಂತೆ ಆದು ಜಿಲ್ಲಾಪರಿಷತ್‌ಗೆ ಹೋಗಬೇಕೋ ಅಥವಾ ನಮ್ಮಲ್ಲಿಯೇ ಉಳಿಯಬೇಕೋ ಎಂಬುದು ನಿರ್ಧಾರವಾಗಿ, ನಮ್ಮಲ್ಲಿಯೇ ಉಳಿದರೆ, ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ : ೧೩೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಗೈರು ಹಾಜರು.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ : ೧೩೬. ಶ್ರೀ ಬಿ. ಎಂ. ಇದಿನಬ್ಬ : ಗೈರು ಹಾಜರು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೧೩೭. ಶ್ರೀ ಗೋಪಾಲ ಮಯ್ಯಂದ ಕಾಮತ್.—ಗೈರುಹಾಜರು. ಶ್ರೀ ಪಂಪಾಪತಿ : ೧೩೮. ಪುನಃ ಗೈರುಹಾಜರು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ರಾಷ್ಟ್ರೀಯ ಹೆದ್ದಾರಿಗಳು, ಎನ್. ಆರ್. ರಸ್ತೆಗಳು ಮತ್ತು ಇತರೆ ಕೆಲಸಗಳಿಗಾಗಿ ಆಯವ್ಯಯದಲ್ಲಿ ಮಂಜೂರಾತಿ

೧೩೯ (೩೫೨) ಶ್ರೀ ಕೆ. ಬಿ. ಪುಟ್ಟಪ್ಪ (ಆರಕಲಗೂಡು).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೬ನೇ ಜುಲೈ ತಿಂಗಳಿಂದ ಡಿಸೆಂಬರ್ ಕೊನೆಯವರೆಗೆ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳು, ಎನ್. ಆರ್. ರಸ್ತೆಗಳು ಮತ್ತು ಬಜೆಟ್ಟಿನಲ್ಲಿ ಸೇರಿರುವ ಕೆಲಸಗಳು ಮಂಜೂರು ಆಗಿರುವುದು ಎಷ್ಟು?

ಆ) ಇವುಗಳ ಪೈಕಿ ಎಷ್ಟು ಕೆಲಸಗಳು ಕಾರ್ಯರೂಪಕ್ಕೆ ಬಂದಿರುತ್ತವೆ?

ಇ) ಕಾರ್ಯರೂಪಕ್ಕೆ ತಂದ ಕೆಲಸಗಳಿಗೆ ಈವರೆಗೆ ಎಷ್ಟು ಹಣ ಪಾವತಿ ಮಾಡಲಾಗಿರುತ್ತದೆ?

ಈ) ಪಾವತಿ ಮಾಡಬೇಕಾದ ಬಾಕಿ ಹಣ ಎಷ್ಟು?

ಉ) ಪಾವತಿ ಮಾಡದೇ ಇರುವುದಕ್ಕೆ ಕಾರಣವೇನು?